1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.21/2020

PW- 05

CW- 02

ಪ್ರ. ಬೋ. ದಿನಾಂಕಃ 22-09-2025

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ನಾಗರಾಜ ಬಿ ಹೆಚ್ |
| ತಂದೆ/ಗಂಡನ ಹೆಸರು | : | ಭರಮಪ್ಪ |
| ವಯಸ್ಸು | : | 59 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಬಿದರಗಟ್ಟೆ, ಹೆನ್ನಾಳಿ |

ಮುಖ್ಯ ವಿಚಾರಣೆಃ -ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ-1, 9, 11 ಇವರು ನನಗೆ ಗೊತ್ತಿದ್ದಾರೆ. ಚಾಸಾ-3, 7 ಇವರೂ ಸಹ ಗೊತ್ತಿದ್ದಾರೆ.

ದಿ.25-05-2019 ರಂದು ಹೊನ್ನಾಳಿ ಪೊಲೀಸ್ ಠಾಣೆಗೆ ನನ್ನನ್ನು ಬರ ಮಾಡಿಕೊಂಡಿದ್ದರು. ಆ ದಿನ ಬೆಳಗಿನ ಜಾವ 3-00 ಗಂಟೆಗೆ ನನಗೆ ಫೋನ್ ಮಾಡಿದ್ದರು. ನನ್ನ ಜೊತೆ ಚಾಸಾ-3 ಭರಮನಗೌಡ ಸಹ ಬಂದಿದ್ದರು. ನಾವು ಠಾಣೆಗೆ ಹೋದಾಗ ಪಿಎಸ್ಐ ರವರು ನಿನಗೆ ನೋಟೀಸು ಕೊಡುತ್ತೇನೆ ಎಂದು ಹೇಳಿ ನೋಟೀಸು ಕೊಟ್ಟರು. ದೇವರಾಜ್ ಎಂಬುವವರು ಬಂದೂಕಿನಿಂದ ಹೊಡೆದಿದ್ದಾರೆ, ಅದರ ಬಗ್ಗೆ ಮಹಜರ್ ಮಾಡುತ್ತೇವೆ ಎಂದು ಹೇಳಿ ನೋಟೀಸು ಕೊಟ್ಟರು. ಸದರಿ ನೋಟೀಸು ನೋಡುತ್ತಿದ್ದು , ಅದರಲ್ಲಿ ನನ್ನ ಸಹಿ ಇದೆ. ನೋಟೀಸನ್ನು ನಿಪಿ.13 ಎಂದು , ನನ್ನ ಸಹಿಯನ್ನು ನಿಪಿ.13(ಎ) ಎಂದು ಗುರುತಿಸಲಾಯಿತು.

ಠಾಣೆಯಲ್ಲಿ 1 ನೇ ಆರೋಪಿ ದೇವರಾಜನನ್ನು ತೋರಿಸಿದರು. ಇಂತಹ ಪಿಸ್ತೂಲ್ ಕೊಡುತ್ತಾನೆ , ನೋಡಪ್ಪ ಎಂದು ಹೇಳಿದರು. ಮೊದಲು ಒಂದು ಪಿಸ್ತೂಲ್ ಹಾಜರುಪಡಿಸಿದ ಅದರಲ್ಲಿ ಬುಲೆಟ್ ಇರಲಿಲ್ಲ. ಇನ್ನೆರಡು ಪಿಸ್ತೂಲ್ ಕೊಟ್ಟ , ಅವುಗಳಲ್ಲಿ ಬುಲೆಟ್ ಇದ್ದವು. ಒಂದು ಶರ್ಟ್, ಒಂದು ಪ್ಯಾಂಟ್ ಕೊಟ್ಟ . ಕಾಟನ್ ನಿಂದ ಮೈ ಮೇಲೆ

, ಕೈ ಮೇಲೆ ಪೌಡರ್ ಏನಾದರೂ ಇದೆಯೋ ಇಲ್ಲವೋ ಎಂಬ ಬಗ್ಗೆ ಪರೀಕ್ಷೆ ಗೋಸ್ಕರ ಕಾಟನ್ ಮೂಲಕ ತೆಗೆದುಕೊಂಡರು. ಆ ವಸ್ತುಗಳನ್ನು ಟೇಬಲ್ ಮೇಲೆ ಇಟ್ಟರು. ಆತ ಬಳಸಿದ್ದಾನೋ, ಬೇರೆ ಬಳಸಿದ್ದಾರೋ ಎಂದು ಬಂದೂಕಿನಲ್ಲಿರುವ ಮುದ್ರೆಗಳನ್ನು ತೆಗೆದುಕೊಂಡರು. ಯಾರೋ ಒಬ್ಬ ಇದ್ದ , ಆತನ ಕಡೆಯಿಂದ ಒಂದು ರೈಲ್ವೆ ಟಿಕೆಟ್, ಬ್ಯಾಂಕಿನ ಸ್ಲಿಪ್ ತೆಗೆದುಕೊಂಡರು. ಸುಮಾರು ಏಳರಿಂದ ಎಂಟು ಐಟಮ್ ತೆಗೆದುಕೊಂಡರು. ಆ ದಿನ ಮಾಡಿದ ಮಹರ್ ನೋಡುತ್ತಿದ್ದೇನೆ. ಅದನ್ನು ನಿಪಿ.14 ಎಂದು ಗುರುತಿಸಲಾಯಿತು. ಅದರಲ್ಲಿನ ನನ್ನ ಸಹಿಯನ್ನು ನಿಪಿ.14(ಎ) ಎಂದು ಗುರುತಿಸಲಾಯಿತು. 14 ಫೋಟೋ ತೋರಿಸಲಾಗಿ , ಆ ದಿನ ಪೊಲೀಸರು ತೆಗೆದಂತಹ ಫೋಟೋಗಳಾಗಿರುತ್ತವೆ ಎಂದು ಸಾಕ್ಷಿ ಗುರುತಿಸಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.15 ರಿಂದ 28 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಐದು ಶೀಲ್ಡ ಕವರಿ ಇದ್ದು , ಸದರಿ ವಸ್ತುಗಳ ಮೇಲೆ ನನ್ನ ಸಹಿ ಪಡೆದ ಚೀಟಿಗಳನ್ನು ಅಂಟಿಸಲಾಗಿತ್ತು. (ಶೀಲ್ಡ್ ಕವರ್ ಒಡೆದು , ಕವರ್ ನಲ್ಲಿದ್ದ ವಸ್ತುಗಳನ್ನು ಸಾಕ್ಷಿಗೆ ತೋರಿಸಲು ಸರ್ಕಾರಿ ಅಭಿಯೋಜಕರಿಗೆ ಅನುಮತಿಸಲಾಯಿತು.)

ಸಾಕ್ಷಿಗೆ ಪಿಸ್ತೂಲ್ ತೋರಿಸಲಾಗಿ ಅದನ್ನು ಸಾಕ್ಷಿ ಗುರುತಿಸಿದ್ದು, ಮು.ಮಾ.8 ಎಂದು ಗುರುತಿಸಲಾಯಿತು. ಇನ್ನೊಂದು ಪಿಸ್ತೂಲ್ ನೋಡುತ್ತಿದ್ದೇನೆ. ಅದನ್ನು ಮು.ಮಾ.9 ಎಂದು ಗುರುತಿಸಲಾಯಿತು. ಸದರಿ ಬಂದೂಕಿನಲ್ಲಿ ಏಳು ಜೀವಂತ ಗುಂಡುಗಳು ಇವೆ. ಅವುಗಳನ್ನು ಒಟ್ಟಾಗಿ ಮು.ಮಾ.9(ಎ) ಎಂದು ಗುರುತಿಸಲಾಯಿತು. ಮತ್ತೊಂದು ಪಿಸ್ತೂಲ್ ನೋಡುತ್ತಿದ್ದೇನೆ. ಅದನ್ನು ಮು.ಮಾ.10 ಎಂದು ಗುರುತಿಸಲಾಯಿತು. ಅದರಲ್ಲಿ ಏಳು ಜೀಂವತ ಗುಂಡುಗಳು ಇದ್ದು , ಅವುಗಳನ್ನು ಒಟ್ಟಾಗಿ ಮು.ಮಾ.10(ಎ) ಎಂದು ಗುರುತಿಸಲಾಯಿತು. ಮೆರುನ್ ಮತ್ತು ಹಳದಿ ಬಣ್ಣದ ಚೌಕಳಿ ಇರುವ ಶರ್ಟ್ ನೋಡುತ್ತಿದ್ದು, ಅದನ್ನು ಮು.ಮಾ.11 ಎಂದು ಗುರುತಿಸಲಾಯಿತು. ನೀಲಿ ಬಣ್ಣದ ಪ್ಯಾಂಟ್ ನೋಡುತ್ತಿದ್ದು, ಅದನ್ನು ಮು.ಮಾ.12 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಕೋರಿದ್ದು , ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ದಾವಣಗೆರೆ.